

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24–09–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔
أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದ ಪ್ರಸ್ತಾಪ ನಡೆಯುತ್ತಿತ್ತು. ಇಂದು ಅದನ್ನು ಮುಂದುವರಿಸುತ್ತಾ ಹಿಜರೀ 15ರಲ್ಲಿ ನಡೆದ ಬೈತುಲ್‌ಮಖ್‌ದಸಿನ ವಿಜಯದ ಬಗ್ಗೆ ಪ್ರಸ್ತಾಪಿಸಲಾಗುವುದು. ಮುತ್ತಿಗೆಯಿಂದ ಬೇಸತ್ತು ಕ್ರೈಸ್ತರು ಸಂಧಾನಕ್ಕೆ ತಯಾರಾದರು. ಒಪ್ಪಂದಕ್ಕೆ ಸ್ವತಃ ಹಝ್ರತ್ ಉಮರ್(ರ) ಬೈತುಲ್‌ಮಖ್‌ದಸಿಗೆ ಬರಬೇಕೆಂಬ ನಿಬಂಧನೆಯನ್ನು ಮುಂದಿಟ್ಟರು. ಹಝ್ರತ್ ಉಮರ್(ರ) ಸಹಾಬರೊಡನೆ ಸಮಾಲೋಚನೆ ನಡೆಸಿದರು. ಆಗ ಹಝ್ರತ್ ಉಸ್ಮಾನ್(ರ) ಹೀಗೆ ಸಲಹೆ ನೀಡಿದರು: "ಕ್ರೈಸ್ತರು ಹೆದರಿರುವರು ಮತ್ತು ಆತ್ಮವಿಶ್ವಾಸವನ್ನು ಕಳೆದಿರುವರು. ನೀವು ಅವರ ವಿನಂತಿಯನ್ನು ರದ್ದುಮಾಡಿದರೆ ಅವರು ಇನ್ನೂ ನಿಂದ್ಯರಾಗುವರು." ಆದರೆ ಹಝ್ರತ್ ಅಲಿ(ರ) ಅವರೊಡನೆ ಏಲಿಯಗೆ ಹೋಗಲು ಸಲಹೆ ನೀಡಿದರು.

ಅನಂತರ ಹಝ್ರತ್ ಉಮರ್(ರ) ಹಝ್ರತ್ ಅಲಿಯವರನ್ನು ಅಥವಾ ಹಝ್ರತ್ ಉಸ್ಮಾನ್‌ರನ್ನು ಅಮೀರನ್ನಾಗಿ ನಿಶ್ಚಯಿಸಿ ಸ್ವತಃ ಬೈತುಲ್‌ಮಖ್‌ದಸಿಗೆ ರವಾನೆಯಾದರು. ಹಝ್ರತ್ ಉಮರ್(ರ)ರ ಈ ಯಾತ್ರೆ ಸಾಮಾನ್ಯ ಯಾತ್ರೆಯಾಗಿರಲಿಲ್ಲ. ಅದರ ಉದ್ದೇಶವು ಇಸ್ಲಾಮಿನ ವೈಭವ ಮತ್ತು ಗಾಂಭೀರ್ಯವನ್ನು ಶತ್ರುಗಳ ಹೃದಯಗಳಲ್ಲಿ ಉಂಟುಮಾಡುವುದಾಗಿತ್ತು. ಆದಾಗ್ಯೂ ಅವರೊಂದಿಗೆ ಯಾವುದೇ ಸೇನೆಯಿರಲಿಲ್ಲ. ಅವರು ಬಹಳ ಸರಳತೆಯಿಂದ ಕೆಲವು ಸಹಾಬರ ಜೊತೆಗೆ ಅಥವಾ ಕೇವಲ ಒಬ್ಬ ಗುಲಾಮನ ಜೊತೆ ರವಾನೆಯಾದರು. ಆದರೂ ಹಝ್ರತ್ ಉಮರ್(ರ) ಬರುತ್ತಿರುವ ವಾರ್ತೆ ತಲುಪುವ ಸ್ಥಳಗಳಲ್ಲೆಲ್ಲ ಭೂಮಿ ನಡುಗುತ್ತಿತ್ತು. ಎಂದರೆ ಜನರು ಹೆದರುತ್ತಿದ್ದರು.

ಮುಹಮ್ಮದ್ ಹುಸೈನ್ ಹೈಕಲ್‌ರ ಪ್ರಕಾರ ಹಝ್ರತ್ ಉಮರ್(ರ) ಕೇವಲ ಒಪ್ಪಂದಕ್ಕಾಗಿ ಹೋಗಿರಲಿಲ್ಲ. ಬದಲಾಗಿ ಹಝ್ರತ್ ಅಮ್ರ್ ಬಿನ್ ಆಸ್(ರ) ಹೆಚ್ಚಿನ ಸಹಾಯವನ್ನು ಬೇಡಿದಾಗ ಹಝ್ರತ್ ಉಮರ್(ರ) ಸಹ ಸ್ವತಃ ಸಿರಿಯ ಮತ್ತು ಜೋರ್ಡನಿನ ನಡುವೆ ಇರುವ ಪ್ರದೇಶವಾದ ಜಾಬಿಯಗೆ ರವಾನೆಯಾದರು. ಈ ವೇಳೆ ಹಝ್ರತ್ ಅಬೂಉಬೈದ(ರ) ಮತ್ತು ಹಝ್ರತ್ ಖಾಲಿದ್(ರ) ಸಹ ಸಿರಿಯದ ಮೇಲೆ ವಿಜಯ ಸಾಧಿಸಿಯಾಗಿತ್ತು. ಬೈತುಲ್‌ಮಖ್‌ದಸಿನ ಮೇಲೆ ವಿಜಯ ಸಾಧಿಸಲು ಉಪಯುಕ್ತ ಮಾರ್ಗವನ್ನು ಕಂಡುಹಿಡಿಯಲಿಕ್ಕಾಗಿ ಅವರಿಬ್ಬರೊಡನೆ ಜಾಬಿಯಗೆ ಬರಲು ಹಝ್ರತ್ ಉಮರ್(ರ) ಆವಶ್ಯಪಟ್ಟರು. ಹಝ್ರತ್ ಅಬೂಉಬೈದ ಮತ್ತು ಹಝ್ರತ್ ಖಾಲಿದ್ ಜಾಬಿಯಗೆ ತಲುಪಿದ ವಿವರ ಶತ್ರುಗಳ ಸರದಾರರಿಗೆ ಗೊತ್ತಾದಾಗ, ಬೈತುಲ್‌ಮಖ್‌ದಸಿನ ಸ್ಥಳಗಳು ಇನ್ನು ಹೆಚ್ಚು ಕಾಲ ನಮ್ಮ ವಶದಲ್ಲಿ ಇರುವುದಿಲ್ಲ ಎಂದು ಅವರು ಅರಿತರು. ಹಾಗೆ ಒಬ್ಬ ಸರದಾರ ಸ್ವಲ್ಪ ಸೈನಿಕರೊಂದಿಗೆ ಈಜಿಪ್ಟಿಗೆ ಪರಾರಿಯಾದನು. ಸಫರೀನೂಸನು ಸಂಧಾನದ ಮಾತುಕತೆಗಾಗಿ ಹಝ್ರತ್ ಉಮರ್(ರ) ಬರಬೇಕೆಂದು ಶರತ್ತು ಹಾಕಿದನು.

ಯಾತ್ರೆಯ ನಡುವೆ ಪ್ರತಿದಿನ ಬೆಳಗ್ಗಿನ ನಮಾಝಿನ ನಂತರ ಹಝ್ರತ್ ಉಮರ್(ರ) ತನ್ನ ಸಂಗಡಿಗರೊಡನೆ ಅನುಗ್ರಹಗಳ ಪೂರ್ತೀಕರಣಕ್ಕಾಗಿ ದುಆ ಮಾಡಲು ಉಪದೇಶಿಸುತ್ತಿದ್ದರು. ಯಝೀದ್ ಬಿನ್ ಅಬುಸುಫ್‌ಯಾನ್, ಖಾಲಿದ್ ಬಿನ್ ವಲೀದ್ ಮುಂತಾದವರು ಜಾಬಿಯದಲ್ಲಿ ಹಝ್ರತ್ ಉಮರ್‌ರನ್ನು ಸ್ವಾಗತಿಸಿದಾಗ, ಅಧಿಕಾರಿಗಳಲ್ಲಿ ಅರೇಬಿಯದ ಸರಳತೆ ಉಳಿದಿಲ್ಲ ಎಂದು ಕಂಡಾಗ ಅವರು ಕುದುರೆಯಿಂದ ಇಳಿದು ಅವರ ಕಡೆಗೆ ಕಲ್ಲುಗಳನ್ನು ಎಸೆದರು. ಬೆಲೆಬಾಳುವ ನಿಲುವಂಗಿಯ ಅಡಿಯಲ್ಲಿ ಆಯುಧಗಳು ಇವೆ, ನಾವು ಸೈನಿಕರ ಕೌಶಲವನ್ನು ಕೈಬಿಟ್ಟಿಲ್ಲವೆಂದು ಅವರು ಹೇಳಿದಾಗ ಹಝ್ರತ್ ಉಮರ್(ರ) ಹಾಗಾದರೆ ಸರಿ, ಈ ಬಾಹ್ಯವಾದ ರೂಪವನ್ನು ಈ ಶತ್ರುಗಳಿಗೆ ತೋರಿಸಲಿಕ್ಕಾಗಿ ಮಾಡಿರುವುದಾದರೆ ಪರವಾಗಿಲ್ಲ ಎಂದು ಹೇಳಿದರು. ಬೆಲೆಬಾಳುವ ವಸ್ತ್ರ ಮತ್ತು ಉತ್ತಮ ಸವಾರಿಮೃಗಗಳನ್ನು ಉಪಯೋಗಿಸಲು ಯಝೀದ್ ಬಿನ್ ಅಬುಸುಫ್‌ಯಾನ್ ಹಝ್ರತ್ ಉಮರ್(ರ)ರೊಡನೆ ವಿನಂತಿಸಿದರು. ಆಗ ಹಝ್ರತ್ ಉಮರ್(ರ) ಹೇಳಿದರು: ಎಲೈ ಯಝೀದ್, ಇಲ್ಲ, ಅಲ್ಲಾಹನಾಣೆ, ನನ್ನ ಇಬ್ಬರು ಸಂಗಡಿಗರಿಂದ ನಾನು ಯಾವ ಸ್ಥಿತಿಯಲ್ಲಿ ಅಗಲಿದೆನೋ ಆ ರೂಪ ಮತ್ತು ಸ್ಥಿತಿಯನ್ನು ನಾನು ಉಪೇಕ್ಷಿಸುವುದಿಲ್ಲ. ಎಂದರೆ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್‌ರೊಂದಿಗೆ ನಾನು ಯಾವ ಸ್ಥಿತಿಯಲ್ಲಿ ಇದ್ದನೋ ಅದೇ ಸ್ಥಿತಿಯಲ್ಲಿ ನಾನು ಇರುವೆನು. ನಾನು ಜನರಿಗಾಗಿ ಸೌಂದರ್ಯ ಮತ್ತು ಚೆಲುವನ್ನು ಸ್ವೀಕರಿಸುವುದಿಲ್ಲ. ಏಕೆಂದರೆ, ಹೀಗೆ ಮಾಡುವುದರಿಂದ ನಾನು ಅಲ್ಲಾಹನ ದೃಷ್ಟಿಯಲ್ಲಿ ತಪ್ಪುಗಾರನಾಗುವನೋ ಎಂದು ನಾನು ಭಯಪಡುತ್ತೇನೆ. ಜನರ ಮುಂದೆ ನಾನು ಆದರಣೀಯನಾಗಿ ಅಲ್ಲಾಹನ ದೃಷ್ಟಿಯಲ್ಲಿ ನಿಂದ್ಯನಾಗಲು ನಾನು ಬಯಸುವುದಿಲ್ಲ. ಒಟ್ಟಿನಲ್ಲಿ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)ರ ಜೀವಿತ ಕಾಲದಲ್ಲಿ ಇದ್ದ ಸ್ಥಿತಿಯಲ್ಲಿಯೇ ಹಝ್ರತ್ ಉಮರ್(ರ) ಕೊನೆಯುಸಿರು ತನಕ ನೆಲೆನಿಂತರು.

ಕೆಲವು ಚರಿತ್ರೆಗಾರರ ಪ್ರಕಾರ ಮುಸ್ಲಿಮರ ಮತ್ತು ಕ್ರೈಸ್ತರ ನಡುವೆ ಈ ಒಪ್ಪಂದ ಜಾಬಿಯದಲ್ಲಿ ನಡೆದಿತ್ತು. ಆದರೆ ಕೆಲವು ವರದಿಗಳ ಪ್ರಕಾರ ಅದು ಏಲಿಯದಲ್ಲಿ ನಡೆದಿತ್ತು. ಈ ಒಪ್ಪಂದದಲ್ಲಿ ಹಝ್ರತ್ ಖಾಲಿದ್ ಬಿನ್ ವಲೀದ್(ರ),

ಹಝ್ರತ್ ಅಮ್ರ್ ಬಿನ್ ಆಸ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮತ್ತು ಹಝ್ರತ್ ಮುಆವಿಯ ಬಿನ್ ಅಬುಸುಫ್ಯಾನರ ಸಹಿಗಳು ಇದ್ದುವು.

(ಹುಝೂರ್ ತಾರೀಖ್ ತಬರಿಯಲ್ಲಿ ನಮೂದಿಸಲಾದ ಒಪ್ಪಂದ ಪತ್ರದ ಲಿಖಿತವನ್ನು ಸಹ ಮುಂದಿರಿಸಿದರು.)

ತಾರೀಖ್ ಇಬ್ನು ಖಲ್ದೂನಿನ ಪ್ರಕಾರ ಈ ಒಪ್ಪಂದದಿಂದ ಕೆಲವು ಸಂಗತಿಗಳು ಸಾಬೀತಾಗುತ್ತವೆ. ಉದಾಹರಣೆಗೆ, ಇಸ್ಲಾಂ ಖಡ್ಗಬಲದಿಂದ ಹರಡಲಿಲ್ಲ, ಮುಸ್ಲಿಮರ ಅಧಿಕಾರದ ಕಾಲದಲ್ಲಿ ಇತರ ಧರ್ಮದವರಿಗೆ ಧಾರ್ಮಿಕ ಸ್ವಾತಂತ್ರ್ಯವಿತ್ತು, ಅನ್ಯ ಸಮುದಾಯದವರಿಂದ ಒತ್ತಾಯಪೂರ್ವಕವಾಗಿ ಜಿಝ್ಯಿಯ ಪಡೆಯಲಾಗುತ್ತಿರಲಿಲ್ಲ, ಈ ಸಂಧಾನದ ಸುದ್ದಿ ಹರಡಿದಾಗ ರಮ್ಲ, ಫೆಲಸ್ತೀನ್ ಮತ್ತು ಲದ್ದೂ ನಿವಾಸಿಗಳು ಸಹ ಇದೇ ರೀತಿಯ ಒಪ್ಪಂದವನ್ನು ಮಾಡಲು ಹಾತೊರೆಯುತ್ತಿದ್ದರು. ಹಝ್ರತ್ ಉಮರ್(ರ) ಫೆಲಸ್ತೀನನ್ನು ಅರ್ಧಾರ್ಧವಾಗಿ ಭಾಗಿಸಿ ಅಲ್‌ಕಮ ಬಿನ್ ಹಕೀಮರನ್ನು ಆಡಳಿತ ಕೇಂದ್ರ ರಮ್ಲದ ಅಧಿಕಾರಿಯನ್ನಾಗಿಯೂ ಮತ್ತು ಅಲ್‌ಕಮ ಬಿನ್ ಮಜ್‌ದದ್‌ರನ್ನು ಏಲಿಯದ ಅಧಿಕಾರಿಯನ್ನಾಗಿಯೂ ಮಾಡಿದರು. ಹಝ್ರತ್ ಉಮರ್(ರ) ಬಹಳ ಸರಳ ವಸ್ತ್ರಗಳನ್ನು ಧರಿಸಿ ಬೈತುಲ್ ಮಖ್‌ದಸಿಗೆ ಹೋದರು. ಅಲ್ಲಿ ಹಝ್ರತ್ ಅಬೂಉಬೈದ(ರ) ಮತ್ತು ಸೇನಾನಾಯಕರು ಅವರನ್ನು ಸ್ವಾಗತಿಸಿದರು. ಕ್ರೈಸ್ತ ಪಾದರಿಗಳು ಸ್ವತಃ ಪಟ್ಟಣದ ಕೀಲಿಗೈಗಳನ್ನು ಹಝ್ರತ್ ಉಮರ್(ರ)ರಿಗೆ ಒಪ್ಪಿಸಿದರು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳುತ್ತಾರೆ: ಕ್ರೈಸ್ತರು ಹಝ್ರತ್ ಉಮರ್(ರ)ರ ಸರಳ ವಸ್ತ್ರಧಾರಣೆಯನ್ನು ಕಂಡಾಗ ಪಟ್ಟಣಗಳ ಕೀಲಿಗೈಗಳನ್ನು ಎಸೆದರು. ಈ ಸೇನಾಧಿಪತಿಯನ್ನು ನಮ್ಮಿಂದ ಎದುರಿಸಲು ಸಾಧ್ಯವಿಲ್ಲವೆಂದು ಹೇಳಿದರು.

ಹಝ್ರತ್ ಉಮರ್(ರ) ಮೊತ್ತಮೊದಲು ಮಸ್ಜಿದ್ ಅಖ್ಸಗೆ ಹೋದರು. ಅನಂತರ ಕ್ರೈಸ್ತರ ದೇವಾಲಯಗಳಲ್ಲಿ ಸುತ್ತಿದರು. ಈ ನಡುವೆ ನಮಾಝಿನ ಸಮಯವಾದಾಗ, ಕ್ರೈಸ್ತರು ಚರ್ಚಿನಲ್ಲಿ ನಮಾಝ್ ಮಾಡಲು ಅನುಮತಿ ಕೊಟ್ಟರು. ಆದರೆ ಮುಂದಿನ ಪೀಳಿಗೆಯವರು ಇದರ ಆಧಾರದಲ್ಲಿ ಕ್ರೈಸ್ತರ ಆರಾಧನಾಲಯಗಳನ್ನು ವಶಪಡಿಸದಿರಲಿ ಎಂಬ ಯೋಚನೆಯಿಂದ ಅವರು ಹೊರಗೆ ಬಂದು ನಮಾಝ್ ನಿರ್ವಹಿಸಿದರು.

ಏಲಿಯದಲ್ಲಿ ಹಝ್ರತ್ ಉಮರ್(ರ) ತಂಗಿದ ವೇಳೆ, ಹಝ್ರತ್ ಅಬೂಉಬೈದ(ರ)ರನ್ನು ಹೊರತುಪಡಿಸಿ ಎಲ್ಲ ಮುಸ್ಲಿಂ ಸರದಾರರು ಹಝ್ರತ್ ಉಮರ್(ರ)ರನ್ನು ಊಟಕ್ಕಾಗಿ ಆಮಂತ್ರಿಸಿದರು. ಇದರ ಬಗ್ಗೆ ಹಝ್ರತ್ ಉಮರ್(ರ) ಹಝ್ರತ್ ಅಬೂಉಬೈದ(ರ)ರೊಡನೆ ಕೇಳಿದಾಗ ಅವರು ಹೇಳಿದರು: ಯಾ ಅಮೀರುಲ್‌ಮೂಮಿನೀನ್, ನಾನು ನಿಮ್ಮನ್ನು ಆಮಂತ್ರಿಸಿದರೆ, ನಿಮಗೆ ನಿಮ್ಮ ಕಣ್ಣೀರನ್ನು ಹತೋಟಿಯಲ್ಲಿಡಲು ಸಾಧ್ಯವಾಗದು ಎಂಬುದಾಗಿ ನಾನು ಭಯಪಡುತ್ತೇನೆ. ಹಝ್ರತ್ ಉಮರ್(ರ) ಅವರ ಡೇರೆಗೆ ಹೋದರು. ಅಲ್ಲಿ ಕುದುರೆಯ ಮೇಲೆ ಹಾಕಲಾಗುವ ಬಟ್ಟೆ ಮತ್ತು ಅದರ ಮೇಲೆ ಇಡಲಾಗುವ ಜೀನು (ಆಸನ) ಮಾತ್ರವಿತ್ತು. ಅವೆರಡನ್ನೇ ಹಝ್ರತ್ ಅಬೂಉಬೈದ(ರ) ತನ್ನ ಹಾಸಿಗೆಯನ್ನಾಗಿ ಮಾಡುತ್ತಿದ್ದರು. ಒಂದು ಮೂಲೆಯಲ್ಲಿ ಒಣರೋಟಿಯಿತ್ತು. ಅದನ್ನು ನೀರಿನೊಂದಿಗೆ ಹಝ್ರತ್ ಉಮರ್(ರ)ರ ಮುಂದೆ ಇರಿಸಿದರು. ಹಝ್ರತ್ ಉಮರ್(ರ) ಈ ದೃಶ್ಯವನ್ನು ಕಂಡು ಅತ್ತುಬಿಟ್ಟರು. ಅಬೂಉಬೈದ(ರ)ರನ್ನು ಆಲಂಗಿಸಿದರು ಆಗ ಹಝ್ರತ್ ಅಬೂಉಬೈದ(ರ) ಹೇಳಿದರು: ನಿಮಗೆ ನಿಮ್ಮ ಕಣ್ಣೀರನ್ನು ನಿಯಂತ್ರಿಸಲು ಸಾಧ್ಯವಾಗದು ಎಂದು ನಾನು ಮೊದಲೇ ಹೇಳಿರಲಿಲ್ಲವೇ?

ಅನಂತರ ಹಝ್ರತ್ ಉಮರ್(ರ) ಹೊರಗೆ ಬಂದು ಜನರ ಮಧ್ಯ ಎದ್ದುನಿಂತರು. ಅನಂತರ ಅಲ್ಲಾಹನಿಗೆ ಸಲ್ಲಬೇಕಾದ ಸ್ತುತಿಯನ್ನು ಅರ್ಪಿಸಿದರು. ಹಝ್ರತ್ ಪೈಗಂಬರ್(ಸ)ರ ಮೇಲೆ ದುರೂದ್ ಪ್ರಾರ್ಥನೆ ಮಾಡಿದ ನಂತರ ಹೀಗೆ ಹೇಳಿದರು: ಎಲೈ ಮುಸ್ಲಿಮರೇ, ಖಂಡಿತವಾಗಿಯೂ ಅಲ್ಲಾಹನು ನಿಮ್ಮೊಡನೆ ಮಾಡಿದ ವಾಗ್ದಾನವನ್ನು ಸತ್ಯಪಡಿಸಿ ತೋರಿಸಿದ್ದಾನೆ, ಅವನು ನಿಮಗೆ ಶತ್ರುಗಳ ವಿರುದ್ಧ ಸಹಾಯವನ್ನು ನೀಡಿದನು, ನಿಮ್ಮನ್ನು ಈ ದೇಶಗಳ ವಾರಸುದಾರರನ್ನಾಗಿ ಮಾಡಿದನು, ನಿಮಗೆ ಭೂಮಿಯಲ್ಲಿ ಸಮಾಧಾನವನ್ನು ಪ್ರದಾನ ಮಾಡಿದನು. ಆದ್ದರಿಂದ ನೀವು ನಿಮ್ಮ ಪ್ರಭುವಿನ ಅನುಗ್ರಹಗಳಿಗೆ ಕೃತಜ್ಞತೆ ಅರ್ಪಿಸಬೇಕು. ನೀವು ಅವಿಧೇಯತ್ವದ ಕೆಲಸಗಳಿಂದ ದೂರವಿರಿ, ಏಕೆಂದರೆ, ಅನುಸರಣೆಯಿಲ್ಲದವರ ಕೆಲಸವು ಅನುಗ್ರಹಗಳಿಗೆ ಕೃತಘ್ನತೆ ತೋರಿಸುವವರಂತಾಗಿದೆ. ಅಲ್ಲಾಹನು ಯಾವುದಾದರೂ ಸಮುದಾಯಕ್ಕೆ ಅನುಗ್ರಹವನ್ನು ವರ್ಷಿಸಿದ ನಂತರ ಅವರು ಅದಕ್ಕೆ ಕೃತಜ್ಞತೆ ತೋರಿಸದೇ ಇದ್ದೂ, ಪಶ್ಚಾತ್ತಾಪ ಮಾಡದೇ ಇದ್ದು ಕೂಡ ಅವರ ಗೌರವವನ್ನು ಅಲ್ಲಾಹನು ಹಿಂದೆಗೆಯದೇ ಇರುವ ಸ್ಥಿತಿ ಉಂಟಾಗುವುದು ಬಹಳ ಕಡಿಮೆ.

ಅಧಿಕಾರಿಗಳು ಅತ್ಯುತ್ತಮ ಆಹಾರಗಳನ್ನು ಬಳಸುತ್ತಿರುವುದರ ಬಗ್ಗೆ ಒಂದು ದಿನ ಹಝ್ರತ್ ಬಿಲಾಲ್(ರ) ಹಝ್ರತ್ ಉಮರ್(ರ)ರಿಗೆ ದೂರು ನೀಡಿದರು. ಸಾಮಾನ್ಯ ಜನರಿಗೆ ಸಾಧಾರಣ ಆಹಾರ ಕೂಡ ಸಿಗುವುದಿಲ್ಲ ಎಂದು ಹೇಳಿದರು. ಆಗ ಹಝ್ರತ್ ಉಮರ್(ರ) ಇದರ ಬಗ್ಗೆ ಅನ್ವೇಷಣೆ ನಡೆಸಿದಾಗ, ಅಲ್ಲಿ ಅರೇಬಿಯಕ್ಕೆ ಹೋಲಿಸಿದರೆ ಎಲ್ಲ ವಸ್ತುಗಳು ಬಹಳ ಅಗ್ಗವಾಗಿದ್ದುವು ಎಂದು ಗೊತ್ತಾಯಿತು. ಆದ್ದರಿಂದ ಹಝ್ರತ್ ಉಮರ್(ರ) ಅಧಿಕಾರಿಗಳನ್ನು ತಡೆಯುವುದಕ್ಕೆ ಬದಲಾಗಿ, ಬಡ ಮುಸ್ಲಿಮರಿಗಾಗಿ ಆವಶ್ಯಕ ವಸ್ತುಗಳ ಬಜೆಟ್ ತಯಾರಿಸಿದರು ಮತ್ತು ಬೈತುಲ್‌ಮಾಲ್‌ನಿಂದ ಈ ಸಾಮಗ್ರಿಗಳನ್ನು ಒದಗಿಸಲಾಗುವುದೆಂದು ಖಾತರಿಪಡಿಸಿದರು.

ಒಂದು ದಿನ ಹಝ್ರತ್ ಉಮರ್(ರ) ಜನರ ಒತ್ತಾಯದ ಮೇರೆಗೆ ಹಝ್ರತ್ ಬಿಲಾಲ್(ರ)ರೊಡನೆ ಅಧಾನ್ ನೀಡಲು ಆಜ್ಞಾಪಿಸಿದರು. ಹಝ್ರತ್ ಬಿಲಾಲ್(ರ) ಅಧಾನ್ ನೀಡಿದಾಗ ಹಝ್ರತ್ ಉಮರ್(ರ) ಸಮೇತ ಎಲ್ಲ ಸಹಾಬರಿಗೆ ಹಝ್ರತ್ ಪೈಗಂಬರ್(ಸ)ರ ಕಾಲದ ನೆನಪು ಬಂತು. ಎಲ್ಲರೂ ಅತ್ತು ವ್ಯಾಕುಲಗೊಂಡರು. ಬೈತುಲ್‌ಮಖ್‌ದಸ್‌ನಿಂದ ಮರಳಿಹೋಗುವಾಗ ಹಝ್ರತ್ ಉಮರ್(ರ) ದೇಶ ಪೂರ್ತಿ ಪರ್ಯಟನೆ ಮಾಡಿದರು. ಅವರು ಮದೀನ ತಲುಪಿದಾಗ ಅವರನ್ನು ಮುಸ್ಲಿಮರು ವೈಭವಪೂರ್ವಕವಾಗಿ ಸ್ವಾಗತಿಸಿದರು. ಹಝ್ರತ್ ಉಮರ್(ರ) ಮಸ್ಜಿದ್ ನಬವಿಗೆ ಹೋದರು. ಎರಡು

ರಕಅತ್ ನಮಾಝ್ ನಿರ್ವಹಿಸಿದರು ಮತ್ತು ಜನರನ್ನು ಸಂಬೋಧಿಸಿ ಭಾಷಣ ಮಾಡಿದರು.

ಹಿಜರೀ 17ರಲ್ಲಿ ರೋಮನರು ತಮ್ಮ ಕಡೆಯಿಂದ ಕೊನೆಯ ಪ್ರಯತ್ನವನ್ನು ಮಾಡಿದರು. ಯರ್ಮೂದಜರ್ದ್ 'ರೇ'ಗೆ ಪರಾರಿಯಾದ ನಂತರ ದ್ವೀಪವಾಸಿಗಳು ಅವರ ಬಗ್ಗೆ ಪೂರ್ಣವಾಗಿ ಬೇಸರಗೊಂಡಿದ್ದರು. ಹಿರ್ಕಲ್ ಸಮುದ್ರ ಮಾರ್ಗವಾಗಿ ಬಂದರೆ, ಅವರು ಅವನಿಗೆ ನೆರವು ನೀಡುವರು ಎಂದು ಅವರು ಹಿರ್ಕಲನಿಗೆ ಬರೆದರು. ಹಿರ್ಕಲ್ ಈ ವಿಷಯದಲ್ಲಿ ಆಲೋಚನೆ ಮಾಡಿದರು. ಅಲೆಕ್ಸಾಂಡ್ರಿಯದಿಂದ ಅಂತಾಕಿಯಗೆ ತಲುಪಲು ಸಮುದ್ರ ಹಡಗುಗಳಿಗೆ ಅವರು ಆದೇಶ ನೀಡಿದರು. ಹಝ್ರತ್ ಅಬುಉಬೈದರಿಗೆ ಅವರ ಕಾರ್ಯಚರಣೆಯ ಬಗ್ಗೆ ಗೊತ್ತಾದಾಗ, ಅವರು ಹಝ್ರತ್ ಖಾಲಿದ್‌ರನ್ನು ಸಮಾಲೋಚನೆಗಾಗಿ ಕರೆದರು. ಹಿರ್ಕಲಿನ ಹಡಗು ಅಂತಾಕಿಯ ತಲುಪಿದಾಗ ಪಟ್ಟಣದ ಬಾಗಿಲುಗಳು ಅವರಿಗಾಗಿ ತೆರೆಯಲ್ಪಟ್ಟಿತು. ಉತ್ತರ ಸಿರಿಯದಲ್ಲಿ ಪ್ರಜೆಗಳು ದಂಗೆಯೇಳುತ್ತಿರುವುದನ್ನು ಕಂಡಾಗ, ಅವರು ಹಮಸಿನಲ್ಲಿ ಸುತ್ತುವರೆಯಲ್ಪಟ್ಟಿದ್ದಾರೆ ಎಂದು ಅಬೂಉಬೈದರಿಗೆ ಅಂದಾಜಾಯಿತು. ಸ್ಥಿತಿಗತಿಗಳ ಕುರಿತು ಅಬೂಉಬೈದ(ರ) ಹಝ್ರತ್ ಉಮರ್‌ರಿಗೆ ತಿಳಿಸಿದರು. ಹಝ್ರತ್ ಉಮರ್(ರ) ಆರಂಭದಿಂದಲೇ ಈ ಅಪಾಯವನ್ನು ಮನಗಂಡು ಮುಂದಾಲೋಚನೆಯಿಂದ ಕೂಫ ಮತ್ತು ಬಸ್ರದಲ್ಲಿ ಸೈನ್ಯ ಠಾಣೆಗಳನ್ನು ಸ್ಥಾಪಿಸಿದ್ದರು. ಹಝ್ರತ್ ಉಮರ್‌ರಿಗೆ ಹಝ್ರತ್ ಅಬೂಉಬೈದರ ಈ ಅರ್ಜಿ ಲಭಿಸಿದಾಗ, ಮುಸ್ಲಿಮರ ಈ ಮಹಾ ಸೇನಾಧಿಪತಿಯು ಬಹಳ ದೊಡ್ಡ ಅಪಾಯದಲ್ಲಿ ಸಿಲುಕಿರುವರು ಎಂದು ಅವರಿಗೆ ಅಂದಾಜಾಯಿತು. ಹೀಗೆ ಖಅ್‌ಖಾಅ್‌ರನ್ನು ಹಮಸಿಗೆ ಕಳುಹಿಸಲು ಹಝ್ರತ್ ಸಅದ್‌ರಿಗೆ ಹಝ್ರತ್ ಉಮರ್(ರ) ಪತ್ರ ಬರೆದರು. ಅದೇ ರೀತಿಯಲ್ಲಿ ರೋಮನರ ವಿರುದ್ಧ ಹೋರಾಡುತ್ತಿದ್ದ ಇತರ ಸೇನಾಧಿಪತಿಗಳಿಗೆ ಹೀಗೆ ಬರೆದರು: ಹಿರ್ಕಲಿನ ಸಹಾಯಕ್ಕಾಗಿ ಯಾವ ಯಾವ ಪ್ರದೇಶಗಳಿಂದ ಸೈನಿಕರು ಒಟ್ಟುಗೂಡಿರುವರೋ ಅಲ್ಲೆಲ್ಲ ನಿಮ್ಮ ಸೈನಿಕರ ಸಂಘವನ್ನು ಕಳುಹಿಸಿರಿ. ಈ ಯುಕ್ತಿಪೂರ್ಣವಾದ ಕಾರ್ಯವೈಖರಿಯ ಕಾರಣದಿಂದ ಹಿರ್ಕಲಿನ ಸಹಾಯಕ್ಕಾಗಿ ಬಂದ ಸೈನಿಕರು ತಮ್ಮ ತಮ್ಮ ಪ್ರದೇಶಗಳಿಗೆ ಮರಳಿ ಹೋದರು. ದ್ವೀಪಗಳಿಂದ ಬಂದ ಸೈನಿಕರು ಮರಳಿಹೋದರು ಎಂಬ ಮಾಹಿತಿ ಲಭಿಸಿದಾಗ, ರೋಮನರ ವಿರುದ್ಧ ಹೋರಾಡಲಿಕ್ಕಾಗಿ ಯುದ್ಧ ಮೈದಾನಕ್ಕೆ ಇಳಿಯಲು ತೀರ್ಮಾನಿಸಲಾಯಿತು. ಹಝ್ರತ್ ಅಬೂಉಬೈದ(ರ) ಮುಸ್ಲಿಂ ಸೈನ್ಯವನ್ನು ಸಂಬೋಧಿಸಿ ಬಹಳ ಪ್ರಭಾವಶಾಲಿ ಭಾಷಣ ಮಾಡಿದರು. ಅಲ್ಲಾಹನು ಮುಸ್ಲಿಮರಿಗೆ ವಿಜಯವನ್ನು ಪ್ರದಾನ ಮಾಡಿದನು. ಹಝ್ರತ್ ಉಮರ್(ರ) ಸಿರಿಯ ಮಾರ್ಗವಾಗಿ ಜಾಬಿಯಗೆ ತಲುಪುವಷ್ಟರಲ್ಲಿ ವಿಜಯದ ಸುದ್ದಿ ಲಭಿಸಿತು. ಹೀಗೆ ಅವರು ಮದೀನಕ್ಕೆ ಮರಳಿಹೋದರು. ಯುದ್ಧಸಂಪತ್ತಿನಲ್ಲಿ ಕೂಫದ ಜನರನ್ನು ಸಹ ಭಾಗಿಯನ್ನಾಗಿ ಮಾಡಬೇಕೆಂದು ಅವರು ಆದೇಶ ನೀಡಿದರು. ಈ ವಿಜಯದ ಮೂರು ವರ್ಷಗಳ ನಂತರ ಹಿಜರಿ 20ರಲ್ಲಿ ಹಿರ್ಕಲ್ ಸಾವನ್ನಪ್ಪಿದನು.

(ಹಝ್ರತ್ ಉಮರ್(ರ)ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹಝ್ರತ್ ಖಲೀಫತುಲ್ ಮಸೀಹರು ಇತ್ತೀಚೆಗೆ ನಿಧನರಾದ ಕೆನಡದಲ್ಲಿ ನೆಲೆಸಿದ್ದ ನಿವೃತ್ತ ಸ್ಟೇಶನ್ ಮಾಸ್ಟರ್ ಸನ್ಮಾನ್ಯ ಚೌಧರಿ ಸಈದ್ ಅಹ್ಮದ್ ಲಖನ್ ಸಾಹಿಬ್, ಬಾಂಗ್ಲದೇಶದ ನೇಶನಲ್ ನಾಇಬ್ ಅಮೀರ್ ಆಗಿದ್ದ ಸನ್ಮಾನ್ಯ ಶಹಾಬುದ್ದೀನ್ ಸಾಹಿಬ್ ಮತ್ತು ರಾಉಲ್ ಅಬ್ದುಲ್ಲಾಹ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು ಹಾಗು ಅವರ ಜನಾಝ ಗಾಇಬ್ ನಿರ್ವಹಿಸುವುದಾಗಿ ಹೇಳಿದರು. ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಪದವಿಗಳ ಉನ್ನತಿಗಾಗಿ ಹುಝೂರ್ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْیِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 24-09-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon